ಅಂದರೆ ಸುಮ್ಮನೆ ನಗುತ್ತಿದ್ದ. ಗೆಳತಿಯರ ಮೂಲಕ ಫಿಲಿಫೀನ್ಸ್ ಎಕಾನಮಿಗೆ ಸಂದಾಯವಾಗುತ್ತಿದೆ ಎಂದು ಆತನ ಗೆಳೆಯರು ಛೇಡಿಸುತ್ತಿದ್ದರು. ಆಫೀಸಿನವರು ಯಾರೂ ಆತನಿಗೆ ಸಾಲ ನೀಡುತ್ತಿರಲಿಲ್ಲ. ಹಣ ಸಿಗುವ ಹೊಸ ಮಾರ್ಗ ಇದೆಯೇ ಎಂದು ಕೇಳಲು ಬಂದಿದ್ದ. ಅವನಲ್ಲಿ, ‘‘ಭೀಮಸೇನನಿಗೆ ನಿನ್ನ ಬುದ್ಧಿ ಗೊತ್ತಿಲ್ಲ. ಸಾಲ ಕೊಟ್ಟರೂ ಕೊಟ್ಟಾನು’’ ಎಂದೆ. ಆಗ ಆತ ಕಣ್ಣರಳಿಸಿ, ‘‘ಭೀಮಸೇನ ನೀವೆಣಿಸಿದಷ್ಟು ಸಾಧು ಅಲ್ಲ. ಅವನ ಕಿತಾಪತಿ ಗೊತ್ತಿಲ್ಲ ನಿಮಗೆ. ನಾಲ್ಕು ಗೋಡೆ ಬಿಟ್ಟು ಸ್ವಲ್ಪ ಹೊರಗೆ ಅಡ್ಡಾಡಿ. ಅವನ ಪರಾಕ್ರಮ ಕೇಳಿನೋಡಿ’’ ಎಂದು ಆರಂಭಿಸಿ ಕ್ಯಾಬಿನ್ ಬಾಗಿಲು ಹಾಕಿ ಬಂದು ಭೀಮಸೇನನ ಬಗ್ಗೆ ಹೇಳುತ್ತಾ ಹೋಗಿದ್ದ.

‘‘ಮದುವೆಯಾಗಿದೆ, ಹೆಂಡತಿ ಭಾರತದಲ್ಲಿದ್ದಾಳೆ ಎಂದು ಭೀಮಸೇನ ಹೇಳಿದ್ದು ಸತ್ಯವೇ. ಆದರೆ, ಆತನಿಗೆ ಇಲ್ಲೊಬ್ಬಳು ಫಿಲಿಫೀನ್ಸ್ ಹೆಂಗಸಿನೊಂದಿಗೆ ಕೂಡ ಸಂಬಂಧ ಇದೆ. ಆಕೆ ನಮ್ಮ ಮ್ಯಾನೇಜರರ ಮನೆಯ ಮನೆಗೆಲಸದವಳು. ಮೊದಲು ಇವರಿಬ್ಬರೂ ಅರಬಿಯೊಬ್ಬರ ಸ್ಟಾರ್ ಹೋಟೆಲಿನಲ್ಲಿ ಕೆಲಸಕ್ಕಿದ್ದರು. ಅಲ್ಲಿ ನೌಕರಿಗಿಂತ ಇವರ ಅಫೇರ್‌ನ ಕಿರಿಕಿರಿ ಜಾಸ್ತಿಯಾಯಿತೆಂದು ಅರಬಿ ವೀಸಾ ಕ್ಯಾನ್ಸಲ್ ಮಾಡಿ ಇಬ್ಬರನ್ನೂ ಹೊರಗಟ್ಟಿದ್ದ. ಆಕೆ ಯಾವುದೋ ವೀಸಾದಲ್ಲಿ ವಾಪಸ್ ಬಂದಿದ್ದಾಳೆ. ಮ್ಯಾನೇಜರರ ಮನೆ ಸಹಿತ ಐದಾರು ಮನೆಗಳಲ್ಲಿ ಮನೆಗೆಲಸ ಮಾಡಿ ಬದುಕುತ್ತಿದ್ದಾಳೆ. ಮ್ಯಾನೇಜರರ ಹೆಂಡತಿಯ ಕಾಲು ಹಿಡಿದು ಹಳೆಯ ಗೆಳೆಯನಾದ ಇವನನ್ನೂ ಕರೆಸಿಕೊಂಡಿದ್ದಾಳೆ. ಮೇಡಮ್ಮಿಗೆ ಅವಳ ಕರಾಮತ್ತು ಗೊತ್ತಿಲ್ಲ. ಮನೆಗೆಲಸದವಳ ಸಹಾಯಕ್ಕೆ ನಿಲ್ಲದ ಯಜಮಾನಿ ಇದ್ದಾರೆಯೇ! ಮೊದಲು ನನ್ನೊಟ್ಟಿಗೆ ಕೆಲಸಮಾಡಿಕೊಂಡಿದ್ದವನು, ಒಳ್ಳೆಯ ಹುಡುಗ ಅಂತೆಲ್ಲ ಬೆಣ್ಣೆ ಹಚ್ಚಿ ಇವನನ್ನು ಇಲ್ಲಿ ನೌಕರಿಗೆ ಹಾಕಿಸಿದ್ದಾಳೆ. ಅವನ ಮುಖನೋಡಿ ಪಾಪ

